ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 92/2011**

**ಫ್ರಾಸಾ- 80 ಚಾಸಾ- 127**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ರಾಮಾ ನಾಯಕ್ |
| ತಂದೆಯ ಹೆಸರುಃ | : | ಲೇಟ್ ಗೋವಿಂದ ನಾಯಕ್ |
| ವಯಸ್ಸುಃ | : | 68 ವರ್ಷ |
| ಉದ್ಯೋಗಃ | : | ನಿವೃತ್ತ ಎಸ್ ಪಿ |
| ವಾಸ | : | ಅರಸೀಕೆರೆ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 22-11-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಜೂನ್ 2007ರಿಂದ ಸೆಪ್ಟೆಂಬರ್ 2012ರವರೆಗೆ ಚಿಕ್ಕಮಗಳೂರು ಲೋಕಾಯುಕ್ತ ಡಿಎಸ್ ಪಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ಸಿ ಎಸ್ ರಂಗಸ್ವಾಮಿ ನಿರ್ವಾಹಕರು, ಕೆಎಸ್ ಆರ್ ಟಿ ಸಿ ಚನ್ನರಾಯಪಟ್ಟಣ ಡಿಪೋ ಇವರು ತಮ್ಮ ಬಲ್ಲಮೂಲ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿದ್ದಾರೆ ಎಂಬ ಮಾಹಿತಿಯ ಮೇರೆಗೆ ನಾನು ಗುಪ್ತ ಮಾಹಿತಿ ತಯಾರು ಮಾಡಿ ಇನ್ನೂ ಹೆಚ್ಚಿನ ಆಸ್ತಿಪಾಸ್ತಿ ಬಗ್ಗೆ ವಿವರವಾದ ತನಿಖೆ ಕೈಗೊಳ್ಳುವ ಅವಶ್ಯಕತೆ ಇದೆ ಎಂದು ದಿನಾಕ 21-4-2009ರಂದು ಒಂದು ವರದಿಯನ್ನು ತಯಾರು ಮಾಡಿ ಕರ್ನಾಟಕ ಲೋಕಾಯುಕ್ತ ಹಾಸನ ಇದರ ಎಸ್ ಪಿ ರವರಿಗೆ ಅನುಮತಿ ಕೋರಿ ಸೋರ್ಸ್ ವರದಿಯೊಂದಿಗೆ ಮನವಿ ಸಲ್ಲಿಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-141 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ರುಜು ಇದ್ದು ನಿಪಿ-141(ಎ) ಎಂದು ಗುರುತಿಸಲಾಯಿತು.

3.ದಿನಾಂಕ 22-4-2009ರಂದು ಪೊಲೀಸ್ ಅಧೀಕ್ಷಕರು ಕರ್ನಾಟಕ ಲೋಕಾಯುಕ್ತ ಇವರು ಪ್ರಕರಣವನ್ನು ನೊಂದಾಯಿಸಿ ತನಿಖೆ ನಡೆಸಲು ಆದೇಶ ಮಾಡಿರುತ್ತಾರೆ. ಸದರಿ ಆದೇಶವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-142 ಎಂದು ಅದನ್ನು ಸ್ವೀಕರಿಸಿದ ಬಗ್ಗೆ ನಾನು ಸಹಿ ಮಾಡಿದ್ದು ಅದನ್ನು ನಿಪಿ-142(ಎ) ಎಂದು ಗುರುತಿಸಲಾಯಿತು. ಅದೇ ದಿನ ಠಾಣಾ ಮೊಕದ್ದಮೆ ಸಂಖ್ಯೆ 11/09ರಂತೆ ಪ್ರಕರಣದ ದಾಖಲಿಸಿ ಪ್ರ.ವ.ವ.ಯನ್ನು ನಿಪಿ143ರಂತೆ ದಾಖಲಿಸಿ ಮುಚ್ಚಿದ ಲಕೋಟೆಯಲ್ಲಿ ಸಿಬ್ಬಂದಿ ಮುಖ್ಯಪೇದೆ ಸಿ ಆನಂದ್ ರವರ ಮೂಲಕ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದುನಿಪಿ-143(ಎ) ಎಂದು ಗುರುತಿಸಲಾಯಿತು. ಅದನ್ನು ತಲುಪಿಸಿದ ಬಗ್ಗೆ ನಿವೇದನೆಯನ್ನು ಈಗ ನೊಡುತ್ತಿದ್ದು ಅದನ್ನು ನಿಪಿ-144 ಎಂದು ಅದರಲ್ಲಿ ನನ್ನ ರುಜು ಇದ್ದು ನಿಪಿ-144(ಎ) ಎಂದುಕ ಗುರುತಿಸಲಾಯಿತು. ನಂತರ ನ್ಯಾಯಾಲಯಕ್ಕೆ ಭೇಟಿ ಮಾಡಿ 3 ಸ್ಥಳಗಳಲ್ಲಿ ಶೋಧನೆ ನಡೆಸಲು ವಾರೆಂಟ್ ನೀಡುವಂತೆ ಮನವಿ ಸಲ್ಲಿಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-145 ಎಂದು ಅದರಲ್ಲಿ ನನ್ನ ರುಜು ಇದ್ದು ನಿಪಿ-145(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯವು ಅದೇ ಮನವಿಯಲ್ಲಿ ಶೋಧನಾ ವಾರೆಂಟನ್ನು ನೀಡಲು ಆದೇಶ ಮಾಡಿರುತ್ತಾರೆ. ಅದನ್ನು ಈಗ ನೋಡುತ್ತಿದ್ದು ನಿಪಿ-145(1) ಎಂದು ಗುರುತಿಸಲಾಯಿತು. ಅದರಂತೆ ಮೂರು ಕಡೆ ಶೋಧನೆ ಮಾಡಲು ನ್ಯಾಯಾಲಯವು ಶೋಧನಾ ವಾರೆಂಟ್ ನೀಡಿರುತ್ತದೆ. ಅವುಗಳು ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ-1, ನಿಪಿ-3 ಮತ್ತು ನಿಪಿ-5 ಆಗಿರುತ್ತವೆ. ಅವುಗಳನ್ನು ಸ್ವೀಕರಿಸಿ ವಾಪಸ್ ಕಛೇರಿಗೆ ಬಂದೆನು.

4.ನಂತರ ಪಂಚರಾಗಿ ಕಳುಹಿಸಿಕೊಡಲು ಜಿಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಹಾಸನ, ಜಿಲ್ಲಾ ಶಸ್ತ್ರಚಿಕಿತ್ಸಕರು, ಜೆಸಿ ಆಸ್ಪತ್ರೆ, ಹಾಸನ, ಸಹಾಯಕ ನಿರ್ದೇಶಕರು, ಸಣ್ಣ ಉಳಿತಾಯ ಇಲಾಖೆ, ಜಿಲ್ಲಾಧಿಕಾರಿಗಳ ಕಛೇರಿ, ಹಾಸನ ಮತ್ತು ಪ್ರಾಂಶುಪಾಲರು, ಜಿಲ್ಲಾ ತರಬೇತಿ ಕೇಂದ್ರ, ಆರೋಗ್ಯ ಮತ್ತು ಕುಟುಂಬಕಲ್ಯಾಣ ಇಲಾಖೆ, ಹಾಸನ ಇವರಿಗೆ ಮನವಿಪತ್ರವನ್ನು ಕಳುಹಿಸಿಕೊಟ್ಟೆನು. ಸದರಿ ಮನವಿಪತ್ರಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿಪಿ-146 ರಿಂದ 149 ಎಂದು ಗುರುತಿಸಲಾಯಿತು. ಅವುಗಳಲ್ಲಿ ನನ್ನ ರುಜುಗಳಿದ್ದು ನಿಪಿ-

146(ಎ)ಯಿಂದ 149(ಎ) ಎಂದು ಗುರುತಿಸಲಾಯಿತು. ಜಿಲ್ಲಾ ಆರೋಗ್ಯ ಮತ್ತು ಕುಟುಂಬಕಲ್ಯಾಣಾಧಿಕಾರಿಗಳು ಯುಕೆ ನಾಗರಾಜ್, ಆರ್ ಭಾರತಿ ಮತ್ತು ದೇವರಾಜಪ್ಪ ಇವರುಗಳನ್ನು ಕಳುಹಿಸಿಕೊಟ್ಟಿರುತ್ತಾರೆ. ಸಹಾಯಕ ಆಡಳಿತ ಅಧಿಕಾರಿ ಜೆ ಸಿ ಆಸ್ಪತ್ರೆ ಇವರು ಶ್ರೀಮತಿ ಪುಷ್ಪಾವತಿ, ಇವರನ್ನು ಮತ್ತು ಜಿಲ್ಲಾ ತರಬೇತಿ ಕೇಂದ್ರದಿಂದ ಪ್ರ.ದ.ಸ. ಆದ ಪ್ರೇಮಲತಾರವರನ್ನು ಸಣ್ಣ ಉಳಿತಾಯ ಇಲಾಖೆಯಿಂದ ದ್ವಿ.ದ.ಸ. ಸತೀಶ್ ಎಂಬುವವರನ್ನು ಕಳುಹಿಸಿಕೊಟ್ಟಿರುತ್ತಾರೆ. ಇವರೆಲ್ಲರೂ ಕಛೇರಿಗೆ ಬಂದು ಅದೇ ದಿವಸ ನನ್ನ ಮುಂದೆ ವರದಿ ಮಾಡಿಕೊಂಡಿರುತ್ತಾರೆ. ಏಕಕಾಲದಲ್ಲಿ 3 ಶೋಧನಾ ವಾರೆಂಟ್ ಗಳಲ್ಲಿ ಕಾಣಿಸಿದ ಸ್ಥಳಗಳಲ್ಲಿ ಕಾಣಿಸಿದ ಶೋಧನೆ ಮಾಡಬೇಕಾಗಿದ್ದರಿಂದ ಕಛೇರಿಯಲ್ಲಿದ್ದ ಪಿಐ ರುದ್ರಮುನಿಯವರಿಗೆ ಚನ್ನರಾಯಪಟ್ಟಣದ ಧನಲಕ್ಷ್ಮೀ ಫೈನಾನ್ಸ್ ನಲ್ಲಿ ಶೋಧನೆ ಮಾಡಲು ನಿಪಿ-5 ರ ಶೋಧನಾ ವಾರೆಂಟ್ ನ್ನು ದಿನಾಂಕ 22-4-2009ರಂದು ನೀಡಿರುತ್ತೇನೆ. ಹೆಚ್ ಎನ ಪಂಚಾಕ್ಷರಪ್ಪ, ಪಿಐ ಚಿಕ್ಕಮಗಳೂರು ಇವರಿಗೆ ಜಯಲಕ್ಷ್ಮಿ ಫೈನಾನ್ಸ್ ಬಾಗೂರು ರಸ್ತೆ, ಚನ್ನರಾಯಪಟ್ಟಣ ಟೌನ್ ಇಲ್ಲಿ ಶೋಧನೆ ಮಾಡಲು ನಿಪಿ-3ರ ಶೋಧನಾ ವಾರೆಂಟನ್ನು ಅದೇ ದಿನಾಂಕದಂದು ನೀಡಿರುತ್ತೇನೆ. ಅವರಿಗೆ ನಾನು ನನ್ನ ಮತ್ತು ಸಿಬ್ಬಂದಿಗಳ ಪರಿಚಯವನ್ನು ಮಾಡಿ **ನನ್ನ ತನಿಖೆಗೆ ಯು.ಕೆ ನಾಗರಾಜ್ ಮತ್ತು ಆರ್. ಭಾರತಿ ರವರನ್ನು, ಪಂಚಾಕ್ಷರಪ್ಪ ಪಿಐ ರವರ ತನಿಖೆಗೆ, ಸತೀಶ್ ಮತ್ತು ಪಷ್ಪಾವತಿರವರನ್ನು, ರುದ್ರಮುನಿ ಪಿ ಐ ರವರ ತನಿಖೆಗೆ ದೇವರಾಜ್ ಮತ್ತು ಪ್ರೇಮಲತಾ ರವರನ್ನು** ನೇಮಿಸಿ ಅವರ ಕರ್ತವ್ಯದ ಬಗ್ಗೆ ಪುನರ್ಮನನ ಮಾಡಿ ದಿನಾಂಕ 23-4-2009ರಂದು ಬೆಳಿಗ್ಗೆ 5-00 ಗಂಟೆಗೆ ಹಾಸನ ಲೋಕಾಯುಕ್ತ ಕಛೇರಿಗೆ ಬರುವಂತೆ ತಿಳಿಸಿರುತ್ತೇನೆ. ಅದರಂತೆ ನಾನು ಬೆಳಿಗ್ಗೆ 5 ಗಂಟೆಗೆ ಹಾಸನ ಲೋಕಾಯುಕ್ತ ಕಛೇರಿಗೆ ಬಂದೆನು. ಅದೇ ಸಮಯಕ್ಕೆ ಸಿಬ್ಬಂದಿ ಆನಂದ್ , ಸತೀಶ್ ಮತ್ತು ರಾಜಶೇಖರ್ ಹಾಗೂ ಸಾಕ್ಷಿದಾರರಾದ ಯು ಕೆ ನಾಗರಾಜ್ ಮತ್ತು ಭಾರತಿ ರವರು ಬಂದು ವರದಿ ಮಾಡಿಕೊಂಡರು. ನಾವೆಲ್ಲರೂ ಚನ್ನರಾಯಪಟ್ಟಣಕ್ಕೆ ಹೋಗಿ ಬೆಳಿಗ್ಗೆ 6-50 ಗಂಟೆಗೆ ಆರೋಪಿತರ ಮನೆ ಗದ್ದೆರಾಮೇಶ್ವರ ಬಡಾವಣೆ, ಭೈರವೇಶ್ವರ ನಿಲಯದ ಮುಂದೆ ಹೋಗಿ ಮನೆ ಬಾಗಿಲನ್ನು ತೆರೆಸಿ ನಮ್ಮ ಪರಿಚಯವನ್ನು ಆರೋಪಿತರಿಗೆ ಮಾಡಿ ಶೋಧನಾ ವಾರೆಂಟ್ ಬಗ್ಗೆ ತಿಳಿಸಿ ಪಂಚರ ಸಮಕ್ಷಮ ವಾರೆಂಟನ್ನು ಜಾರಿ ಮಾಡಿ ಪಂಚನಾಮೆಗೆ ಸಹಕರಿಸುವಂತೆ ಕೋರಿಕೊಂಡೆನು ಮತ್ತು ಆರೋಪಿತರ ಹಾಗೂ ಪಂಚರ ಸಹಿಯನ್ನು ಪಡೆದಿರುತ್ತೇನೆ. ಸದರಿ ಶೋಧನಾ ವಾರೆಂಟನ್ನು ಈಗ ನೋಡುತ್ತಿದ್ದು ಅದು ಈಗಾಗಲೇ ನಿಪಿ-1 ಎಂದು ಗುರುತಿಸಲ್ಪಟ್ಟಿರುತ್ತದೆ. ಅದರಲ್ಲಿ ಆರೋಪಿಯ

ರುಜುವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ರುಜು ಇದ್ದುನಿಪಿ-1(ಸಿ) ಎಂದು ಗುರುತಿಸಲಾಯಿತು.

5.ಮನೆಯ ಶೋಧನೆಯನ್ನು ಮಾಡಿದಾಗ ದೊರೆತ ದಾಖಲೆಗಳನ್ನು ಮತ್ತು ದೊರೆತ ಎಲ್ಲಾ ವಸ್ತುಗಳನ್ನು ಸವಿಸ್ತಾರವಾಗಿ ಪಂಚನಾಮೆಯಲ್ಲಿ ನಮೂದಿಸಲಾಯಿತು.

6.ಮನೆಯ ಒಳಗಡೆ ಪ್ರವೇಶಿಸಿದಾಗ ವೆರಾಂಡಾದಲ್ಲಿ ಕೆಎ-19-ಯು-2872ರ ಹೀರೋಹೋಂಡಾ ಮೋಟಾರ್ ಸೈಕಲ್ ಕಂಡುಬಂತು, ಅದರ ಬೆಲೆ 40,000 ಎಂದು ಅಂದಾಜಿಸಲಾಯಿತು. ಗೋಡೆಯ ಬಳಿ 5 ಜೊತೆ ಹೆಂಗಸರ ಚಪ್ಪಲಿ, 2 ಜೊತೆ ಗಂಡಸರ ಚಪ್ಪಲಿ ಒಂದು ಜೊತೆ ಬೂಟುಗಳು ಇದ್ದವು, ಅವುಗಳ ಬೆಲೆ ಅಂದಾಜು 2000ರೂಪಾಯಿ ಎಂದು ಅಂದಾಜಿಸಲಾಯಿತು. ಇವುಗಳನ್ನು ಪಂಚನಾಮೆಯ ಕ್ರಮಸಂಖ್ಯೆ1 ರಲ್ಲಿ ನಮೂದಿಸಿರುತ್ತೇನೆ.

7.ಮನೆಯ ಮಧ್ಯದ ದೊಡ್ಡ ಹಾಲ್ ನಲ್ಲಿ ಒಟ್ಟು 9 ಐಟಂಗಳು ಕಂಡುಬಂದಿದ್ದು ಅವುಗಳನ್ನು ಪಂಚನಾಮೆಯ ಕ್ರಮಸಂಖ್ಯೆ 2ರಲ್ಲಿ ನಮೂದಿಸಿರುತ್ತೇನೆ. ಅವುಗಳ ಒಟ್ಟು ಅಂದಾಜು ಮೌಲ್ಯ 84,150ರೂಪಾಯಿ ಎಂದು ನಮೂದಿಸಲಾಯಿತು.

8.ಮಂಜುನಾಥ್ ರವರ ಮಲಗುವ ಕೊಠಡಿಯಲ್ಲಿ ಒಟ್ಟು 6 ಐಟಂಗಳು ಕಂಡುಬಂದಿದ್ದು ಅವುಳನ್ನು ಪಂಚನಾಮೆಯ ಕ್ರಮಸಂಖ್ಯೆಯ 3 ರಲ್ಲಿ ಕಾಣಿಸಿದ್ದು ಅವುಗಳ ಒಟ್ಟು ಅಂದಾಜು ಮೌಲ್ಯ 39,388 ಎಂದು ಕಾಣಿಸಿರುತ್ತೇನೆ.

9.ಮನೆಯ ಡೈನಿಂಗ್ ಹಾಲ್ ನಲ್ಲಿ 4 ಐಟಂಗಳು ಕಂಡುಬಂದಿದ್ದು ಅವುಗಳನ್ನು ಪಂಚನಾಮೆಯ ಕ್ರಮಸಂಖ್ಯೆ 4 ರಲ್ಲಿ ಕಾಣಿಸಿದ್ದು ಅವುಗಳ ಅಂದಾಜು ಮೌಲ್ಯ 27,200 ಎಂದು ಕಾಣಿಸಿರುತ್ತೇನೆ.

10.ಅಡುಗೆ ಮನೆಯಲ್ಲಿ 5 ಐಟಂಗಳು ಕಂಡುಬಂದಿದ್ದು ಅವುಗಳನ್ನು ಪಂಚನಾಮೆಯ ಕ್ರಮಸಂಖ್ಯೆ5 ರಲ್ಲಿ ಕಾಣಿಸಿದ್ದು ಅವುಗಳ ಅಂದಾಜು ಮೌಲ್ಯ 31,100 ಎಂದು ಕಾಣಿಸಿರುತ್ತೇನೆ.

11.ರಂಗಸ್ವಾಮಿ ಮಲಗುವ ಕೊಠಡಿಯಲ್ಲಿ 5 ಐಟಂಗಳು ಕಂಡುಬಂದಿದ್ದು ಅವುಗಳನ್ನು ಪಂಚನಾಮೆಯ ಕ್ರಮಸಂಖ್ಯೆ 6 ರಲ್ಲಿ ಕಾಣಿಸಿದ್ದು ಅವುಗಳ ಅಂದಾಜು ಮೌಲ್ಯ 72,200ರೂಪಾಯಿ ಎಂದು ಕಾಣಿಸಿರುತ್ತೇನೆ. ಐಟಂ ನಂಬರ್ 5 ರ ಬೀರುವಿನಲ್ಲಿ ದಾಖಲೆಗಳು ದೊರೆತಿದ್ದು ಅವುಗಳನ್ನು ಐಟಂ ನಂಬರ್ 5(ಎ) ಯಿಂದ (ಹೆಚ್) ವರೆಗೆ ಕಾಣಿಸಿರುತ್ತೇನೆ. ಹಾಗೆಯೇ ಅಲ್ಲಿ ಸುಮಾರು 9 ಬೆಳ್ಳಿ ಐಟಂಗಳು ಕಂಡುಬಂದಿದ್ದು ಅವುಗಳನ್ನು ಐಟಂ ನಂಬರ 5(ಐ)ಎಂದು ಕಾಣಿಸಿರುತ್ತೇನೆ.

12.ಬೆಳ್ಳಿಯ ಸಾಮಾನುಗಳನ್ನು ಶ್ರೀ ಗೋಪಾಲ್ ಅಕ್ಕಸಾಲಿಗರು ಇವರನ್ನು ಕರೆಸಿ ಓರೆ ಹಚ್ಚಿಸಿ ತೂಕ ಹಾಕಿದಾಗ ಅವರು ಅದರ ಒಟ್ಟು ಮೌಲ್ಯ 18000ಎಂದು ಅಂದಾಜಿಸಿರುತ್ತಾರೆ. ಅದನ್ನೂ ಪಂಚನಾಮೆಯಲ್ಲಿ ಕಾಣಿಸಿರುತ್ತೇನೆ.

13.ದಾಳಿ ಸಮಯದಲ್ಲಿ ಕೆ ಬಿ ಜಯಲಕ್ಷ್ಮಿ ರವರ ಮೈಮೇಲೆ ಸುಮಾರು 10ಗ್ರಾಂ ತೂಕದ ಚಿನ್ನದ ಒಡವೆಗಳಿದ್ದು ಅವುಗಳನ್ನು ಅಕ್ಕಸಾಲಿಗರಾದ ಗೋಪಾಲ್ ರವರು ಮೌಲ್ಯಮಾಪನ ಮಾಡಿ ಅಂದಾಜು 10ಸಾವಿರ ರೂಪಾಯಿ ಎಂದು ಅಂದಾಜಿಸಿರುತ್ತಾರೆ. ಹಾಗೆಯೇ ರಂಗಸ್ವಾಮಿಯವರ ಮೈಮೇಲೆ ಟ್ಟು 5 ಗ್ರಾಂ ಚಿನ್ನ ಇದ್ದು ಅದನ್ನು ಗೋಪಾಲ್ ರವರು ತೂಕ ಮಾಡಿ ಮೌಲ್ಯವನ್ನು ಅಂದಾಜು 5000 ಎಂದು ತಿಳಿಸಿರುತ್ತಾರೆ. ಆ ಚಿನ್ನದ ಒಡವೆಗಳನ್ನು ಅವರವರ ಮೈಮೇಲೆ ಬಿಡಲಾಯಿತು. ರಂಗಸ್ವಾಮಿರವರ ಪ್ಯಾಂಟಿನ ಜೇಬಿನಲ್ಲಿ 4780ರೂಪಾಯಿ ದೊರೆತಿದ್ದು ಅದನ್ನು ಅವರು ತನ್ನ ಮನೆಯ ಮತ್ತು ಹಂಡತಿಯ ಆಸ್ಪತ್ರೆಯ ಖರ್ಚಿಗಾಗಿ ಇಟ್ಟುಕೊಂಡಿರುವುದಾಗಿ ತಿಳಿಸಿದ ಮೇರೆಗೆ ಅದನ್ನು ಪಂಚನಮೆಯಲ್ಲಿ ನಮೂದು ಮಾಡಿ ಬಿಟ್ಟಿರುತ್ತೇನೆ. ಈಎಲ್ಲಾ ವಿಚಾರಗಳನ್ನು ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ.

14.ನಂತರ ದಾಸ್ತಾನು ಕೊಠಡಿಯನ್ನು ಶೋಧಿಸಿದಾಗ 2 ಐಟಂಗಳು ಕಂಡುಬಂದಿದ್ದು ಅವುಗಳ ಅಂದಾಜು ಮೌಲ್ಯ 14500ಎಂದು ಅಂದಾಜಿಸಿ ಅವುಗಳನ್ನು ಪಂಚನಾಮೆಯ ಕ್ರಮಸಂಖ್ಯೆ 7ರಲ್ಲಿ ನಮೂದಿಸಿರುತ್ತೇನೆ.

15.ಸ್ನಾನದ ಕೊಠಡಿ ಪರಿಶೀಲಿಸಿದಾಗ 2 ಐಟಂಗಳು ಕಂಡುಬಂದಿದ್ದು ಅವುಗಳನ್ನು ಪಂಚನಾಮೆಯ ಕ್ರಮಸಂಖ್ಯೆ 8 ರಲ್ಲಿ ಕಾಣಿಸಿದ್ದು ಅವುಗಳ ಅಂದಾಜು ಮೌಲ್ಯ 1480ರೂಪಾಯಿ ಎಂದು ಕಾಣಿಸಿರುತ್ತೇನೆ.

16.ದಾಸ್ತಾನು ಕೊಠಡಿಯ ಮೇಲ್ಭಾಗದ ಮಹಡಿಯನ್ನು ಶ ೋನಿಧಿಸಿದಾಗ ಅದು ಮರದಿಂದ ಮಾಡಿರುವ ಮಹಡಿಯಾಗಿದ್ದು ಅಲ್ಲಿ 2 ಐಟಂಗಳು ಕಂಡುಬಂದಿದ್ದು ಅವುಗಳನ್ನು ಪಂಚನಾಮೆಯ ಕ್ರಮಸಂಖ್ಯೆ 9 ರಲ್ಲಿ ಕಾಣಿಸಿದ್ದು ಅವುಗಳ ಅಂದಾಜು ಮೌಲ್ಯ 10,850 ರೂಪಾಯಿ ಎಂದು ಕಾಣಿಸಿರುತ್ತೇನೆ.

17.ದನದಕೊಟ್ಟಿಗೆಯನ್ನು ಶೋಧಿಸಿದಾಗ 2 ಐಟಂಗಳು ಕಂಡುಬಂದಿದ್ದು ಅವುಗಳನ್ನು ಪಂಚನಾಮೆಯ ಕ್ರಮಸಂಖ್ಯೆ 10ಲ್ಲಿ ಕಾಣಿಸಿದ್ದು ಅವುಗಳ ಅಂದಾಜು ಮೌಲ್ಯ 31100 ರೂಪಾಯಿ ಎಂದು ಕಾಣಿಸಿರುತ್ತೇನೆ.

18.ಮನೆಯ ಮುಂಭಾಗ ಕೆಎ-13-ಕ್ಯು-8626ರ ಹೀರೋಹೋಂಡಾ ಸ್ಲೆಂಡರ್ ಇದ್ದು ಅದರ ರೀಡಿಂಗ್ 35354 ಇತ್ತು. ಅದರ ಬೆಲೆ 45000 ರೂಪಾಯಿ ಎಂದು ಅಂದಾಜಿಸಲಾಯಿತು.

19.ಮನೆ ಮುಂಭಾಗದಲ್ಲಿ ಎಡ ಮತ್ತು ಬಲಪಕ್ಕದಲ್ಲಿ ಸುಮಾರು 27000ದ ತೆಂಗಿನ ಕಾಯಿಗಳಿದ್ದು ಆರೋಪಿತರ ಅಭಿಪ್ರಾಯದಂತೆ ಒಂದು ತೆಂಗಿನ ಕಾಯಿಗೆ 5ರೂನಂತೆ ನಿಗಧಿಪಡಿಸಿ

ಅವುಗಳ ಅಂದಾಜು ಬೆಲೆ 1,35000ರೂಪಾಯಿ ಎಂದು ಅಂದಾಜಿಸಲಾಯಿತು.

20.ಮನೆಯ ಎಡಪಕ್ಕದಲ್ಲಿ 43 ಇಂಟು 13 ಅಡಿ ಅಳತೆಯ ತೆಂಗಿನಕಾಯಿ ದಾಸ್ತಾನಿಸಲು ಕಬ್ಬಿಣದ ಗ್ರಿಲ್ ಒಳಗೊಂಡ ಕಟ್ಟಡ ನಿರ್ಮಿಸಿದ್ದು ಅದರ ಅಂದಾಜು ಬೆಲೆ 300000 ಆಗಬಹುದೆಂದು ಅಂದಾಜಿಸಲಾಯಿತು.

21.ಮನೆಯ ಹಿಂಭಾಗ ಸರ್ವೆ ನಂಬರ್ 135/3ರಲ್ಲಿ 037ಗುಂಟೆ ವಿಸ್ತೀರ್ಣದ ತೆಂಗಿನ ತೋಟ ಇದ್ದು ಅದರಲ್ಲಿ 52 ತೆಂಗಿನಮರಗಳು ಮತ್ತು ಒಂದು ಬೋರ್ವೆಲ್ ಇದ್ದು ಮೀಟರ್ ವಿದ್ಯುತ್ ಸಂಪರ್ಕಕ್ಕಾಗಿ ಬಿಟ್ಟುಕೊಂಡು ಹೋಗಿರುತ್ತಾರೆಂದು ತಿಳಿಸಿರುತ್ತಾರೆ. ಈ ಎಲ್ಲಾ ವಿಚಾರನ್ನು ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ-2ರ ಪಂಚನಾಮೆಯಲ್ಲಿ ನಮೂದಿಸಿ ಆರೋಪಿತರ ಸಹಿ ಪಡೆದಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ಅಕ್ಕಸಾಲಿಗರ ಹಾಗೂ ಸಾಕ್ಷಿದಡಾರರ ಸಹಿ ಪಡೆದಿರುತ್ತೇನೆ. ಪಂಚನಾಮೆ ಮುಗಿದ ನಂತರ ಆರೋಪಿತರಿಗೆ ಒಂದು ಪಂಚನಾಮೆ ನೀಡಿ ನಿಪಿ-2ರಲ್ಕೆ ಅವರ ಸಹಿ ಪಡೆದಿರುತ್ತೇನೆ. ಸದರಿ ಅವರ ಸಹಿಯನ್ನು ನಿಪಿ2(ಡಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕ್ರಮಸಂಖ್ಯೆ 6ರಲ್ಲಿ ಕಾಣಿಸಿದ 5(ಎ)ಯಿಂದ 5(ಹೆಚ್) ವರೆಗಿನ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

22.ಪಂಚನಾಮೆ ಕಾಲದಲ್ಲಿ ದೊತೆದ ದಾಖಲಾತಿಗಳನ್ನು ಮತ್ತು ಬೆಳ್ಳಿಯ ವಸ್ತುಗಳನ್ನು ವಶಕ್ಕೆ ಪಡೆದು ಉಳಿದ ವಸ್ತುಗಳನ್ನು ಅಲ್ಲೇ ಬಿಟ್ಟಿರುತ್ತೇನೆ. ಪಂಚನಾಮೆ ಮುಗಿದ ನಂತರ ದಾಖಲಾತಿಗಳನ್ನು ಮತ್ತು ಬೆಳ್ಳಿಯ ವಸ್ತುಗಳನ್ನು ತೆಗೆದುಕೊಂಡು ಕಛೇರಿಗೆ ಬಂದು ಅವುಗಳನ್ನು ಮಾಲುಪಟ್ಟಿಯಲ್ಲಿ ಸೇರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು.

23.ನಂತರ ದಿನಾಂಕ 24-4-2009ರಂದು ಸಾಕ್ಷಿದಾರರಾದ ಚಾಸಾ-1ರಿಂದ 6ರವರ ಹೇಳಿಕೆ ಮಾಡಿಕೊಂಡಿರುತ್ತೇನೆ. ದಿನಾಂಕ 24-4-2009ರಂದು ಪಿಐ ರವರಾದ ರುದ್ರಮುನಿ ಮತ್ತು ಪಂಚಾಕ್ಷರಪ್ಪ

ರವರು ತಮಗೆ ನೀಡಿದ್ದ ಶೋಧನಾ ವಾರೆಂಟನ್ನು ಜಾರಿಗೊಳಿಸಿ ಶೋಧನಾ ವಾರೆಂಟ್, ಶೋಧನಾ ಪಂಚನಾಮೆ ಹಾಗೂ ದೊರೆತ ವಸ್ತುಗಳೊಂದಿಗೆ ನನ್ನ ಮುಂದೆ ಹಾಜರಾಗಿ ಅವುಗಳನ್ನು ಹಾಜರುಪಡಿಸಿ ಮನವಿ ನೀಡಿರುತ್ತಾರೆ. ಪಿಐ ರುದ್ರಮುನಿಯವರು ನೀಡಿರುವ ಮನವಿಯನ್ನು ಈಗ ನೋಡುತ್ತಿದ್ದು ಅದು ಈಗಾಗಲೇ ನಿಪಿ-140 ಎಂದು ಗುರುತಿಸಲ್ಪಟ್ಟಿರುತ್ತದೆ. ಅವರು ಹಾಜರುಪಡಿಸಿರುವ ಶೋಧನಾ ಪಂಚನಾಮೆ ಈಗಾಗಲೇ ನಿಪಿ-6 ಎಂದು ಗುರುತಿಸಲ್ಪಟ್ಟಿರುತ್ತದೆ. ಪಂಚಾಕ್ಷರಪ್ಪ ರವರು ನೀಡಿರುವ ಮನವಿ ಈಗಾಗಲೇ ನಿಪಿ-138 ಎಂದು ಗುರುತಿಸಲ್ಪಟ್ಟಿದ್ದು ಅವರು ನೀಡಿದ ಶೋಧನಾ ಪಂಚನಾಮೆ ನಿಪಿ-4 ಎಂದು ಗುರುತಿಸಲ್ಪಟ್ಟಿರುತ್ತದೆ. ನಿಪಿ-140 ಮತ್ತು 138ಕ್ಕೆ ನಾನು ಸ್ವೀಕರಿಸಿದ ಬಗ್ಗೆ ರುಜು ಹಾಕಿದ್ದು ಅವುಗಳನ್ನು ನಿಪಿ-140(ಬಿ) ಮತ್ತು 138(ಬಿ) ಎಂದು ಗುರುತಿಸಲಾಯಿತು. ಪಿಐ ರುದ್ರಮುನಿ ಮತ್ತು ಪಂಚಾಕ್ಷರಪ್ಪ ರವರು ಶೋಧನಾ ಪಂಚನಾಮೆಯೊಂದಿಗೆ ಹಾಜರುಪಡಿಸಿದ ದಾಖಲಾತಿಗಳು ಮತ್ತು ವಸ್ತುಗಳನ್ನು ಮಾಲುಪಟ್ಟಿಯಲ್ಲಿ ಸೇರಿಸಿ ನ್ಯಾಯಾಲಯಕ್ಕ ನಿವೇದಿಸಿಕೊಂಡಿರುತ್ತೇನೆ. ನಂತರ ಮೂರೂ ಶೋಧನಾ ವಾರೆಂಟ್ ಮತ್ತು ಅದಕ್ಕೆ ಸಂಬಂಧಿಸಿದ ಪಂಚನಾಮೆಗಳನ್ನು ಮನವಿಯೊಂದಿಗೆ ಸಿಬ್ಬಂದಿ ರಂಗೇಗೌಡ ರವರ ಮೂಲಕ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-150ಎಂದು ಅದರಲ್ಲಿ ನನ್ನ ರುಜು ಇದ್ದು ನಿಪಿ-150(ಎ) ಎಂದು ಗುರುತಿಸಲಾಯಿತು. ನಂತರ ಚಾಸಾ-1 ರಿಂದ 6ರವರ ಹೇಳಿಕೆ ಮಾಡಿಕೊಂಡಿರುತ್ತೇನೆ. ಸಾಕ್ಷಿದಾರರನ್ನು ಬಿಡುಗಡೆಗೊಳಿಸಿ ಮನವಿಯೊಂದಿಗೆ ಅವರವರ ಇಲಾಖೆಗೆ ಕಳುಹಿಸಿಕೊಟ್ಟಿರುತ್ತೇನೆ. ಆ ಮನವಿ ಗಳನ್ನು ಈಗ ನೋಡುತ್ತಿದ್ದು ನಿಪಿ-151 ರಿಂದ ನಿಪಿ-154 ಎಂದು ಅವುಗಳಲ್ಲಿ ನನ್ನ ರುಜುಗಳಿದ್ದು ನಿಪಿ-151(ಎ) ಯಿಂದ ನಿಪಿ-154(ಎ) ಎಂದು ಗುರುತಿಸಲಾಯಿತು.

24. ದಿನಾಂಕ 25-4-2009ರಂದು ಸಿಬ್ಬಂದಿ ಆನಂದ್, ಸತೀಶ್, ರಜಶೇಖರ್, ಅಕ್ಕಸಾಲಿಗರಾದ ಗೋಪಾಲ್, ಸುನೀತ, ಬಸವರಾಜು, ಸಿ ಬಸವರಾಜು, ವಿ ಆರ್ ರಾಮಕೃಷ್ಣ, ರಂಗೇಗೌಡ, ಬಿ ಕೆ ಪುಟ್ಟಸ್ವಾಮಾಚಾರ್, ಹೆಚ್ ಎನ್ ಪಂಚಾಕ್ಷರಪ್ಪ ಮತ್ತು ಪಿಐ ರುದ್ರಮುನಿ ಇವರ ಹೇಳಿಕೆ ಮಾಡಿಕೊಂಡಿರುತ್ತೇನೆ. ನಂತರ ಅದೇದಿನ ಆರೋಪಿತರಿಗೆ ಅನುಸೂಚಿ 1 ರಿಂದ 16ನ್ನು ಸಮುಚಿತ ಮಾರ್ಗದಲ್ಲಿ ಹಾಗೂ 17 ರಿಂದ 23 ನ್ನು ನೇರವಾಗಿ ಆರೋಪಿತರಿಗೆ ಕಳುಹಿಸಿಕೊಟ್ಟು ಮಾಹಿತಿಯನ್ನು

ಕಳುಹಿಸಿಕೊಡಲು ಕೋರಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯು ಕಾಲಾವಕಾಶ ಕೋರಿದ ಕಾರಣ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**